ಜ.ಶಿ.ವಿ.ವ. ಸಂಸ್ಥೆಯ

# ಡಿ.ಜಿ.ಎಮ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ,

## ಆಸ್ಪತ್ರೆ ಮತ್ತು ಸ್ನಾತಕೋತ್ತರ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಗದಗ

ಜಿ॥ ಗದಗ - 582103 **ಅಲುಮ್ನಿ ಅಸೋಸಿಯೆಶನ್** ರಾಜ್ಯ - ಕರ್ನಾಟಕ

# 21ನೇ ಸ್ನೇಹ ಸಿಂಚನ 2025

# ಆಮಂತ್ರಣ ಪತ್ರಿಕೆ

## ಹಳೆಯ ದಿನಗಳ ನೆನಪುಗಳನ್ನು ಮೆಲಕು ಹಾಕುವ ಹಳೆಯ ವಿದ್ಯಾರ್ಥಿಗಳ ಪುನರ್ಮಿಲನ ಸಮಾರಂಭ

ದಿನಾಂಕ : 14-12-2025 ರವಿವಾರ ಬೆಳಿಗ್ಗೆ 10:00 ಘಂಟೆಗೆ

ಸ್ಥಳ : ಶ್ರೀ ಶಿವಾನಂದ ಕಲ್ಯಾಣ ಮಂಟಪ, ಡಾ. ಎಸ್.ವಿ. ಸವಡಿ ರಸ್ತೆ, ಗದಗ

**ಗದುಗಿನ ಶ್ರೀ ಶಿವಾನಂದ ಬೃಹನ್ಮಠದ ಜಗದ್ಗುರುಗಳ ಕೃಪಾಶೀರ್ವಾದದಿಂದ**

ಘನ ಅಧ್ಯಕ್ಷತೆ : ಡಾ. ಎಸ್. ಎನ್. ಬೆಳವಡಿ
ಪ್ರಾಚಾರ್ಯರು, ಡಿ.ಜಿ.ಎಮ್. ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ, ಗದಗ

ಅಧ್ಯಕ್ಷತೆ : ಡಾ. ಐ. ಎಸ್. ಸರ್ವಿ
ಅಧ್ಯಕ್ಷರು, 21ನೇ ಸ್ನೇಹ ಸಿಂಚನ

ಮುಖ್ಯ ಅತಿಥಿಗಳು : ಶ್ರೀ ಗುರುರಾಜ ಹೊಸಕೋಟೆ
ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಖ್ಯಾತ ಜಾನಪದ ಕಲಾವಿದರು, ಬೆಂಗಳೂರು
ಶ್ರೀ ಶಬ್ಬೀರ್ ಡಾಂಗೆ
ಖ್ಯಾತ ಜಾನಪದ ಕಲಾವಿದರು, ಮೂಡಲಗಿ
ಡಾ. ಕುಬೇರ ಸಂಕ
ಪ್ರಾಚಾರ್ಯರು, ಆರ್.ಜಿ.ಎ.ಎಮ್.ಸಿ. ಮಾಹೆ, ಪಾಂಡಿಚೇರಿ

ಅತಿಥಿಗಳು : ಡಾ. ಜೈಪಾಲಸಿಂಗ್ ಸಮೋರೆಕರ
ಜಿಲ್ಲಾ ಆಯುಷ್ ಅಧಿಕಾರಿಗಳು, ಗದಗ
ಶ್ರೀ ಬಿ. ಎಸ್. ಪಾಟೀಲ
ಕಾರ್ಯದರ್ಶಿಗಳು, ಜಗದ್ಗುರು ಶಿವಾನಂದ ವಿದ್ಯಾವರ್ಧಕ ಸಂಸ್ಥೆ, ಗದಗ
ಡಾ. ಜಿ. ಬಿ. ಪಾಟೀಲ
ಸಂಸ್ಥಾಪಕ ಗೌರವಾಧ್ಯಕ್ಷರು, ಡಿ.ಜಿ.ಎಂ. ಅಲುಮ್ನಿ ಅಸೋಸಿಯೆಶನ್, ಗದಗ

-: ಸ್ವಾಗತ ಕೋರುವವರು :-

| ಡಾ. ವ್ಹಿ. ಎಸ್. ಆಡೂರ | ಡಾ. ಪ್ರವೀಣ ಎಲ್. ಗೌರಿ | ಡಾ. ದೀಪ್ತಿ ಮಮದಾಪೂರ |
|---|---|---|
| ಕಾರ್ಯದರ್ಶಿ | 2000ನೇ ಸಾಲಿನ ಪ್ರತಿನಿಧಿ | 2000ನೇ ಸಾಲಿನ ಪ್ರತಿನಿಧಿ |

**ಪದಾಧಿಕಾರಿಗಳು ಹಾಗೂ ಸರ್ವ ಸದಸ್ಯರು ಡಿ.ಜಿ.ಎಮ್. ಎ.ಎಮ್.ಸಿ.**
**ಅಲುಮ್ನಿ ಅಸೋಸಿಯೇಶನ್ ಗದಗ ಹಾಗೂ 2000ನೇ ಬ್ಯಾಚಿನ ವಿದ್ಯಾರ್ಥಿಗಳು**

## ಕಾರ್ಯಕ್ರಮಗಳ ವಿವರ

| | | |
|---|---|---|
| ಧ್ವಜಾರೋಹಣ | ಬೆ. 07:30 ರಿಂದ | ಬೆ. 08:00 ರವರೆಗೆ |
| ನೋಂದಣಿ ಮತ್ತು ಉಪಹಾರ | ಬೆ. 08:30 ರಿಂದ | ಬೆ. 10:00 ರವರೆಗೆ |
| ಸ್ವಾಗತ | ಬೆ. 10:00 ರಿಂದ | ಬೆ. 10:15 ರವರೆಗೆ |
| ಉದ್ಘಾಟನೆ ಮತ್ತು ಪ್ರಾಸ್ತಾವಿಕ ನುಡಿ | ಬೆ. 10:15 ರಿಂದ | ಬೆ. 10:30 ರವರೆಗೆ |
| ಅತಿಥಿಗಳ ಭಾಷಣ | ಬೆ. 10:30 ರಿಂದ | ಮ. 12:30 ರವರೆಗೆ |
| ಗುರುವಂದನೆ ಮತ್ತು ಸನ್ಮಾನ | ಮ. 12:30 ರಿಂದ | ಮ. 01:30 ರವರೆಗೆ |
| ಅಧ್ಯಕ್ಷರ ನುಡಿ | ಮ. 01:30 ರಿಂದ | ಮ. 01:50 ರವರೆಗೆ |
| ವಂದನಾರ್ಪಣೆ | ಮ. 01:50 ರಿಂದ | ಮ. 02:00 ರವರೆಗೆ |
| ಭೋಜನ | ಮ. 02:00 ರಿಂದ | ಮ. 03:00 ರವರೆಗೆ |
| ಸರ್ವಸಾಧಾರಣ ಸಭೆ | ಮ. 03:00 ರಿಂದ | ಮ. 03:30 ರವರೆಗೆ |
| ಮನೋರಂಜನೆ ಕಾರ್ಯಕ್ರಮಗಳು | ಮ. 03:30 ರಿಂದ | ಸ. 04:30 ರವರೆಗೆ |
| ಲಘು ಉಪಹಾರ | ಸ. 04:30 ರಿಂದ | ಸ. 05:00 ರವರೆಗೆ |

## ಕಾರ್ಯಕಾರಿ ಮಂಡಳಿ

| | |
|---|---|
| ಗೌರವಾಧ್ಯಕ್ಷರು | ಡಾ. ಸಂತೋಷ ಎನ್. ಬೆಳವಡಿ |
| ಅಧ್ಯಕ್ಷರು | ಡಾ. ಐ. ಎಸ್. ಸರ್ವಿ |
| ಕಾರ್ಯದರ್ಶಿ | ಡಾ. ವ್ಹಿ. ಎಸ್. ಆಡೂರ |
| ಸಹಕಾರ್ಯದರ್ಶಿ | ಡಾ. ಕುಮಾರ ಚೌಡಪ್ಪಳವರ |
| ಖಜಾಂಚಿ | ಡಾ. ವೀಣಾ ಕೋರಿ |

## ನಿರ್ದೇಶಕರು

| | | |
|---|---|---|
| ಡಾ. ಎಸ್. ಆರ್. ಹಿರೇಮಠ | ಡಾ. ಕಲ್ಲೇಶ ಮೂರಶಿಳ್ಳಿನ | ಡಾ. ಎಂ. ವಿ. ಸೊಬಗಿನ |
| ಡಾ. ಆರ್. ವಿ. ಶೆಟ್ಟರ | ಡಾ. ಪ್ರಭುರಾಜ ಚವಡಿ | ಡಾ. ಬೂದೇಶ ಕನಾಜ |
| ಡಾ. ರಾಜು ಶೇಠ್ | ಡಾ. ಶಿವಶಂಕರ ಪೂಜಾರ | ಡಾ. ಗಿರೀಶ ಬಡಿಗೇರ |
| ಡಾ. ಗಿರೀಶ ದಾನಪ್ಪಗೌಡರ | ಡಾ. ವ್ಹಿ. ಎಸ್. ಕಂಠಿ | ಡಾ. ನವೀನ ಸಜ್ಜನ |
| ಡಾ. ವೀರೇಶ ಅಂಗಡಿ | ಡಾ. ಜಯಕುಮಾರ ಬ್ಯಾಳಿ | ಡಾ. ಪ್ರಭು ನಾಗಲಾಪೂರ |
| ಡಾ. ಕುಮಾರ ಕಂಠಿಮಠ | ಡಾ. ಶಶಿಕಾಂತ ಹಿರೇಮಠ | ಡಾ. ಸಂಜೀವ ರೆಡ್ಡಿ |
| ಡಾ. ಕಮಲಾಕ್ಷಿ ಅಂಗಡಿ | ಡಾ. ಜ್ಯೋತಿ ಬಿರಾದಾರ | ಡಾ. ಸತೀಶ ಜಾಲಿಹಾಳ |

**ಎಲ್ಲ ಹಿರಿಯ ಕಿರಿಯ ವೈದ್ಯ ಮಿತ್ರರಿಗೆ & ಗುರು ವೃಂದಕ್ಕೆ**
**21ನೇ ಸ್ನೇಹ ಸಿಂಚನ ಕಾರ್ಯಕ್ರಮಕ್ಕೆ ಅತ್ಯಂತ ಆತ್ಮೀಯ ಸ್ವಾಗತ**
**ಸಂಪೂರ್ಣ ಪ್ರಾಯೋಜಕತ್ವ : 2000ನೇ ಬ್ಯಾಚ್‌ನ ವಿದ್ಯಾರ್ಥಿ ಬಳಗ**

## ಸರ್ವರಿಗೂ ಆದರದ ಸುಸ್ವಾಗತ



# ಅಲುಮ್ನಿ ಬಾಂಧವರೇ....

ಗದುಗಿನ ಪ್ರತಿಷ್ಠಿತ ಜ.ಶಿ.ವಿ.ವ. ಸಂಸ್ಥೆಯ ಡಿಜಿಎಮ್ ಆಯುರ್ವೇದ ವೈದ್ಯಕೀಯ ಮಹಾವಿದ್ಯಾಲಯ ಎಂಬ ಸಂಸ್ಥೆ ವಿದ್ಯಾರ್ಥಿಗಳಿಗೆ ಕೇವಲ ಜ್ಞಾನಾರ್ಜನೆಗೈಯುವ ಸ್ಥಾನವಾಗಿರದೆ ಸಾವಿರಾರು ವೈದ್ಯರುಗಳನ್ನು ದೇಶದಾದ್ಯಂತ ಪಸರಿಸಿ ಅವರೆಲ್ಲರಿಗೂ ಬದುಕು ಕಟ್ಟಿಕೊಳ್ಳುವ ಕಲೆ ಕಲಿಸಿದ ಕೇಂದ್ರ ಎಂಬುದು ಅದರ ಹೆಗ್ಗಳಿಕೆ.

ಈ ಮಹಾವಿದ್ಯಾಲಯದಿಂದ ಆಯುರ್ವೇದ ವೈದ್ಯಕೀಯ ಪದವಿ ಪಡೆದ ಅನೇಕ ವೈದ್ಯರು ದೇಶದಾದ್ಯಂತ ಮತ್ತು ವಿದೇಶಗಳಲ್ಲೂ ವೈದ್ಯಕೀಯ, ವೈದ್ಯಕೇತರ ಕ್ಷೇತ್ರಗಳಲ್ಲೂ ಮತ್ತು ಅನೇಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡು ಮಹಾವಿದ್ಯಾಲಯದ ಕೀರ್ತಿಯನ್ನು ಹೆಚ್ಚಿಸುತ್ತಿರುವುದು ಅತ್ಯಂತ ಶ್ಲಾಘನೀಯ.

ಪ್ರತಿಯೊಬ್ಬರ ಜೀವನದ ಅವಿಸ್ಮರಣೀಯ ನೆನಪುಗಳೆಂದರೆ ಅದು ವಿದ್ಯಾರ್ಥಿ ಜೀವನದ ಕ್ಷಣಗಳು, ಹಿರಿಯ ಕಿರಿಯರೆಂಬ ಭೇದವಿಲ್ಲದೆ ಇಂತಹ ಸುಮಧುರ ಕ್ಷಣಗಳನ್ನು ನೆನಹು ಮಾಡಿಕೊಳ್ಳಲು ಮಹಾವಿದ್ಯಾಲಯದ ಹಳೆಯ ವಿದ್ಯಾರ್ಥಿ ಸಂಘದಿಂದ ಪ್ರತಿವರ್ಷವು ಆಯೋಜಿಸಲ್ಪಡುವ ಸ್ನೇಹ ಸಿಂಚನ ಒಂದು ಸದಾವಕಾಶ.

ಸ್ನೇಹಿತರೆ, ದಿನಾಂಕ 14–12–2025 ರವಿವಾರದಂದು 21ನೇ ಸ್ನೇಹ ಸಿಂಚನ ಸಮಾವೇಶ ಶ್ರೀ ಶಿವಾನಂದ ಕಲ್ಯಾಣ ಮಂಟಪದಲ್ಲಿ ಜರುಗಲಿದೆ. ಈ ಕಾರ್ಯಕ್ರಮದ ಸಂಪೂರ್ಣ ಪ್ರಾಯೋಜಕತ್ವವನ್ನು ಬಿಎಎಂಎಸ್ 2000 (ಮಿಲೇನಿಯಮ್) ಸಾಲಿನ ನಾವುಗಳು ವಹಿಸಿದ್ದು ನಮಗೆ ಅತ್ಯಂತ ಸಂತಸದಾಯಕ. ಒಟ್ಟು 60 ವಿದ್ಯಾರ್ಥಿಗಳಾದ ನಾವುಗಳು 2005ರಲ್ಲಿ ಪದವಿ ಪಡೆದವು, ನಮ್ಮ ಬ್ಯಾಚಿನ ಅನೇಕ ಸ್ನೇಹಿತರು ಸಮಾಜಮುಖಿ ವೈದ್ಯಕೀಯ ಕ್ಷೇತ್ರಗಳಲ್ಲಿ ಸಾಧನೆ ಮಾಡುತ್ತಿರುವುದಲ್ಲದೇ ಅನೇಕರು ಸ್ನಾತಕೋತ್ತರ ಪದವಿ ಪಡೆದು ಸರಕಾರಿ ಮತ್ತು ಖಾಸಗಿ ಆಯುರ್ವೇದ ಕಾಲೇಜುಗಳಲ್ಲಿ ಪ್ರಾಧ್ಯಾಪಕರುಗಳಾಗಿ, ಪ್ರಾಚಾರ್ಯರಾಗಿ ಮತ್ತು ಅನೇಕ ಸ್ನೇಹಿತರು ಆರೋಗ್ಯ ವಿಶ್ವವಿದ್ಯಾಲಯಗಳ ಆಡಳಿತಾತ್ಮಕ ಹುದ್ದೆಗಳಲ್ಲಿ ಸೇವೆ ಸಲ್ಲಿಸುತ್ತಿರುವುದು ನಮಗೆಲ್ಲರಿಗೂ ಅತ್ಯಂತ ಸಂತಸದ ವಿಷಯ.

ಈ 21ನೇ ಸ್ನೇಹ ಸಿಂಚನ ಸಮಾವೇಶವನ್ನು ನಾವು ಕೇವಲ ಒಂದು ದಿನದ ಕಾರ್ಯಕ್ರಮವನ್ನಾಗಿಸದೆ ವರ್ಷವಿಡಿ ಅನೇಕ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿದ್ದೇವೆ. 'ಡಿಜಿಎಮ್ ಅಲುಮಿನಿ ಟಾಕ್ಸ್' ಎಂಬ ನೂತನ ಶೈಕ್ಷಣಿಕ ಕಾರ್ಯಕ್ರಮದ 21ಕ್ಕೂ ಹೆಚ್ಚು ಯಶಸ್ವಿ ಮಾಲಿಕೆಗಳನ್ನು ನಾವುಗಳು ನಡೆಸಿದ್ದು ವಿಶೇಷ. ಅದೇ ರೀತಿ ಅನೇಕ ಉಚಿತ ವೈದ್ಯಕೀಯ ಚಿಕಿತ್ಸಾ ಶಿಬಿರಗಳು, ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರ, ಮತ್ತು ಆಸ್ಪತ್ರೆಯ ಒಳ ರೋಗಿಗಳಿಗೆ ಫಲವಿತರಣೆ ಮುಂತಾದ ಕಾರ್ಯಕ್ರಮಗಳನ್ನು ನಡೆಸಿದ್ದು ಹೆಮ್ಮೆಯ ವಿಷಯ.

ಸ್ನೇಹಿತರೆ, ದಿನಾಂಕ 14–12–2025ರ 21ನೇ ಸ್ನೇಹ ಸಿಂಚನ ಕಾರ್ಯಕ್ರಮದಲ್ಲೂ ಗಣ್ಯ ಅತಿಥಿಗಳಿಂದ ಜಾನಪದ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಈ ಕಾರ್ಯಕ್ರಮಕ್ಕೆ ತಾವೆಲ್ಲರೂ ಕುಟುಂಬ ಸಮೇತ ಆಗಮಿಸಿ ನಮ್ಮ ಆತಿಥ್ಯವನ್ನು ಸ್ವೀಕರಿಸಬೇಕೆಂದು ಸವಿನಯ ಪ್ರಾರ್ಥನೆ.

ವಂದನೆಗಳೊಂದಿಗೆ

**ತಮ್ಮ ಪ್ರೀತಿಯ 2000ನೇ ಸಾಲಿನ ಬಿ.ಎ.ಎಮ್.ಎಸ್. ವಿದ್ಯಾರ್ಥಿಗಳು**

